0101

# First Semester Three Year LL.B. Examination, June 2011
# CONTRACT – I (Course – I) (General Principles of Contracts)

Duration : 3 Hours Max. Marks : 100

**Instruction :** 1. Answer **all** 5 questions.

2. **One** essay type and **one** short note question or problem from **each** Unit have to be attempted, which is referred as Part **(a)** and **(b)** in **all** the Units.

3. Figures to the **right** indicate marks.

4. Answer should be written either in **English** or in **Kannada completely.**

## UNIT – I

Q. No.1. (a) Define contract. Explain the essentials of valid contract. Marks : 15

ಕರಾರಿನ ವ್ಯಾಖ್ಯಾನವನ್ನು ಕೊಡಿರಿ. ನ್ಯಾಯಬದ್ಧ ಕರಾರಿನ ಅವಶ್ಯಕ ಅಂಶಗಳನ್ನು ವಿವರಿಸಿರಿ.

OR/ಅಥವಾ

Briefly explain the rules relating to valid acceptance.

ಕಾನೂನುಬದ್ಧ ಅಂಗೀಕಾರದ ನಿಯಮಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿರಿ.

(b) Solve the following problem. Marks : 5

ಕೆಳಗಿನ ಸಮಸ್ಯೆಗಳನ್ನು ನಿರ್ಧರಿಸಿರಿ.

"A" promises to pay "B" Rs. 1,000/-, if "B" beats "C". "B" beats "C", But "A" refuses to pay. Can "B" recover ?

"B"ನು "C"ಗೆ ಹೊಡೆದರೆ 1,000/- ರೂ.ಗಳನ್ನು "A"ನು "B"ಗೆ ಕೊಡಲು ವಾಗ್ದಾನ ಮಾಡುತ್ತಾನೆ. "B"ನು "C"ಗೆ ಹೊಡೆಯುತ್ತಾನೆ. ಆದರೆ "A"ನು ಹಣಕೊಡಲು ನಿರಾಕರಿಸುತ್ತಾನೆ. "B"ನು ಹಣ ಪಡೆಯಬಹುದೇ ?

OR/ಅಥವಾ

In a self service departmental store a customer picks up the article and takes it to cash counter. Cashier refuses to sell. Has the customer any right against the owner of the shop ?

ಒಂದು ಸ್ವ-ಸೇವೆ ವಿಭಾಗೀಯ ಮಳಿಗೆಯಲ್ಲಿ ಒಬ್ಬ ಗ್ರಾಹಕನು ಒಂದು ವಸ್ತುವನ್ನು ಆಯ್ದುಕೊಂಡನು. ಅದನ್ನು ಹಣ ಪಾವತಿ ಮಾಡುವ ಸ್ಥಳಕ್ಕೆ ಒಯ್ಯುತ್ತಾನೆ. ಹಣ ಪಡೆಯುವವನು ಮಾರಲು ನಿರಾಕರಿಸುತ್ತಾನೆ. ಗ್ರಾಹಕನಿಗೆ ಅಂಗಡಿ ಮಾಲಿಕನ ವಿರುದ್ಧ ಯಾವುದಾದರೂ ಹಕ್ಕು ಇದೆಯೇ ?

## UNIT – II

Q. No.2. (a) Define coercion. How does, it differ from undue influence ? Marks : 15

''ಜುಲುಮೆ'' ಎಂದರೇನು ? ಇದು ಹೇಗೆ ಅನುಚಿತ ಪ್ರಭಾವದಿಂದ ಭಿನ್ನವಾಗಿದೆ ?

OR/ಅಥವಾ

Discuss in brief the agreements declared void in the Indian Contract Act.

ಭಾರತೀಯ ಒಪ್ಪಂದ ಅಧಿನಿಯಮದಡಿಯಲ್ಲಿ ಶೂನ್ಯ ಎಂದು ಘೋಷಿಸಲ್ಪಟ್ಟ ಕರಾರುಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

(b) Solve the following : Marks : 5

ಕೆಳಗಿನ ಸಮಸ್ಯೆಯನ್ನು ನಿರ್ಧರಿಸಿರಿ :

"A" tells his wife that he would commit suicide if she did not transfer her personal assets to him. She does so under threat. Can wife avoid this contract ?

''ಅ'' ನು ತನ್ನ ಹೆಂಡತಿಗೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೆದರಿಸಿ, ಆಕೆಯ ಸ್ವಂತ ಆಸ್ತಿಯನ್ನು ತನ್ನ ಹೆಸರಿಗೆ ವರ್ಗಾಯಿಸಿ ಕೊಳ್ಳುತ್ತಾನೆ. ಹೆಂಡತಿಯು ಈ ಒಪ್ಪಂದವನ್ನು ರದ್ದುಪಡಿಸಲು ಸಾಧ್ಯವೇ ?

OR/ಅಥವಾ

Write short note on misrepresentation.

ತಪ್ಪು ನಿರೂಪಣೆಯ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – III

Q. No.3. (a) State the rules relating to appropriation of payments between debtor and creditor. Marks : 15

ಸಾಲಗಾರ ಮತ್ತು ಸಾಲಿಗ ಇವರ ನಡುವೆ ಸಂದಾಯ ವಿನಿಯೋಗಕ್ಕೆ ಸಂಬಂಧಿಸಿದ ನಿಯಮಗಳನ್ನು ತಿಳಿಸಿರಿ.

OR/ಅಥವಾ

State briefly the various ways of discharge of contract.

ಕರಾರನ್ನು ಕೊನೆಗೊಳಿಸುವ ಹಲವಾರು ವಿಧಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

(b) Solve the problems : Marks : 5

ಕೆಳಗಿನ ಸಮಸ್ಯೆಗಳನ್ನು ನಿರ್ಧರಿಸಿರಿ :

The unloading of ship was delayed beyond the date agreed with the ship owners, owing to a strike of dock labourers. On a suit by the ship owners for damages the plea of impossibility of performance was raised. Advise the ship owners.

ಹಡಗು ಬಂದರು ಕಾರ್ಮಿಕರ ಮುಷ್ಕರದ ಪ್ರಯುಕ್ತ ಹಡಗೊಂದರ ಸರಕುಗಳನ್ನು ಇಳಿಸುವುದು ಒಪ್ಪಿಕೊಂಡ ದಿನಕ್ಕಿಂತ ಹೆಚ್ಚಿನ ವಿಳಂಬವಾಗುವುದರ ವಿರುದ್ಧ ಹಡಗಿನ ಮಾಲೀಕ ಪರಿಹಾರ ಕೋರಿ ದಾವೆ ಹಾಕಿದ್ದಾನೆ. ಕಾರ್ಮಿಕರ ಮುಷ್ಕರದಿಂದ ಸರಕುಗಳನ್ನು ಇಳಿಸುವುದು ಅಸಾಧ್ಯವಾಗಿತ್ತು ಎನ್ನುವ ವಾದವನ್ನು ಮಂಡಿಸಲಾಗಿದೆ. ಹಡಗಿನ ಮಾಲೀಕನಿಗೆ ಸಲಹೆ ನೀಡಿ.

OR/ಅಥವಾ

P, Q and R jointly promise to pay Z Rs. 3,000/-. P and Q are not traceable. Can "Z" compel 'R' to pay him in full.

'P', 'Q' ಮತ್ತು 'R' ಜಂಟಿಯಾಗಿ "Z" ಗೆ 3,000/- ರೂ. ಕೊಡಲು ವಚನ ಕೊಡುತ್ತಾರೆ. ಆದರೆ ತದನಂತರ P ಮತ್ತು Q ಕಾಣೆಯಾಗುತ್ತಾರೆ. "Z" ನು "R" ನನ್ನು 3,000/- ಕೊಡಲು ಒತ್ತಾಯಿಸಬಹುದೇ ?

## UNIT – IV

Q. No.4. (a) What is meant by quasi-contract ? Explain different kinds of quasi contracts. Marks : 15

ಕರಾರು ಹೋಲುವ ಸಂಬಂಧ ಎಂದರೇನು ? ವಿವಿಧ ರೀತಿಯ ಕರಾರುಗಳನ್ನು ಹೋಲುವ ಸಂಬಂಧಗಳನ್ನು ವಿವರಿಸಿ.

OR/ಅಥವಾ

Briefly explain the principles relating to measuring of damages in case of breach of contract.

ಕರಾರೊಂದು ಉಲ್ಲಂಘನೆಯಾದಾಗ, ನಷ್ಟಕ್ಕೊಳಗಾದಾಗ ವ್ಯಕ್ತಿಗೆ, ದೊರೆಯಬಹುದಾದ ಪರಿಹಾರದ ಮೌಲ್ಯಮಾಪನದ ನಿಯಮಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿರಿ.

(b) Write short note : : Marks : 5

ಟಿಪ್ಪಣಿ ಬರೆಯಿರಿ :

Exemplary damages

ದಂಡನಾ ರೂಪದ ಪರಿಹಾರ

OR/ಅಥವಾ

Quantum meruit

ಶ್ರಮಕ್ಕೆ ತಕ್ಕ ಫಲ

## UNIT – V

Q. No.5. (a) Briefly, explain the contracts which cannot be specifically enforced. Marks : 15

ಯಾವ ಕರಾರುಗಳನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಬರುವುದಿಲ್ಲ ಎನ್ನುವುದನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

OR/ಅಥವಾ

What are the principles the court should consider while granting temporary injunction ?

ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುವಾಗ ನ್ಯಾಯಾಲಯ ಪರಿಗಣಿಸಬೇಕಾಗಿರುವ ತತ್ವಗಳು ಯಾವುವು ?

(b) Write short note : Marks : 5

ಟಿಪ್ಪಣಿ ಬರೆಯಿರಿ :

Rectification of instruments.

ದಾಖಾಲಾತಿಗಳ ಸರಿಪಡಿಸುವಿಕೆ

OR/ಅಥವಾ

Permanent injunction.

ಶಾಶ್ವತ ತಡೆಯಾಜ್ಞೆ